# “ಶ್ರೀ ಜಯತೀರ್ಥ ವಿಜಯ”

ಪ್ರವೃಜ್ಯ ಕುಲಶಿರೋರತ್ನ ಜಯತೀರ್ಥರ
ಸುವೃತತಿ ಜಾಂಘ್ರಿಯಲಿ ಶರಣಾದೆ ಸತತ
ಸರ್ವೇಷ್ಟದಾತರು ವಿಜ್ಞಾನ ಬೋಧಕರು
ಮಧ್ವೇಷ್ಟ ಶ್ರೀರಮಾಪತಿಗೆ ಪ್ರಿಯತಮರು ।ಪ।

ಅಖಿಳ ಗುಣ ಆಧಾರ ನಿರ್ದೋಷ ಶ್ರೀರಮಣ
ಜಗದಾದಿ ಮೂಲಗುರು ಅಗುರು ಶ್ರೀಹಂಸ
ವಾಗೀಶ ಸನಕಾದಿ ದೂರ್ವಾಸಾದಿಗಳ
ಪೀಳಿಗೆ ಗುರುಗಳಿಗೆ ಶರಣು ಶರಣೆಂಬೆ ।೧।

ಪುರುಷೋತ್ತಮತೀರ್ಥ ಅಚ್ಯುತಪ್ರೇಕ್ಷರಿಗೆ
ಪುರುಷೋತ್ತಮಾರ್ಯರ ಕರ ಕಮಲ ಜಾತ
ವರ ವಾತ ಅವತಾರ ಆನಂದತೀರ್ಥರ
ಚರಣಪದ್ಮದಲಿ ನಾ ಶರಣಾದೆ ಸತತ ।೨।

ಶ್ರೀಮಧ್ವ ಆನಂದತೀರ್ಥ ಕರ ಅಬ್ಜಜರು
ಪದ್ಮನಾಭ ನೃಹರಿ ಮಾಧವಾಕ್ಷೋಭ್ಯ
ಈ ಮಹಾ ಗುರುಗಳು ಸರ್ವರಿಗೂ ಆನಮಿಪೆ
ಶ್ರೀಮನೋಹರ ಪ್ರಿಯರು ಸಂತೈಪರೆಮ್ಮ ।೩।

ತ್ರೇತೆಯಲ್ಲಿ ಶ್ರೀರಾಮಚಂದ್ರನ್ನ ಸೇವಿಸಲು
ಸೀತಾ ಪ್ರತಿಕೃತಿಯಲ್ಲಿ ತಾಪೊಕ್ಕ
ವಾತನ್ನೊಲಿಸಿ ಕೊಳ್ಳದವರ್ಗೆ ಹರಿ ಒಲಿಯ
ಎಂದು ಜಗಗೆ ತೋರ್ದ ವಾಲಿಯೇ ಇಂದ್ರ ।೪।

# “ಶ್ರೀ ಜಯತೀರ್ಥ ವಿಜಯ”

ವಾತಾವತಾರ ಹನುಮಂತನೇ ದ್ವಾಪರದಿ
ಕೌಂತೇಯ ಭೀಮನು ಅವನಿಗೆ ಅನುಜ
ಇಂದ್ರ ಅರ್ಜುನನಾಗಿ ಸೇವಿಸಿ ಹನುಮಧ್ವಜ
ಪಾದ ಮೂಲದಿ ಕುಳಿತ ಕೃಷ್ಣನು ಒಲಿದ ।೫।

ಅಖಂಡೈಕ ಸಾರಾತ್ಮ ಅನಂತರೂಪಾಭಿನ್ನ
ಶ್ರೀಕೃಷ್ಣರಾಮನೇ ಋಷಿವಂಶದಲ್ಲಿ
ಈ ಕುವಲಯದಲ್ಲಿ ಪ್ರಾದುರ್ಭವಿಸಿದ ವ್ಯಾಸ
ಅಕಳಂಕ ಸುಖಜಿತ್ ವಪುಷ ಶ್ರೀಪತಿಯ ।೬।

ಆಮ್ನಾಯ ತತಿ ಪುರಾಣಗಳು ಪೇಳ್ವಂತೆ
ರಮೆಯರಸ ವ್ಯಾಸನ್ನ ಸೇವಿಸಲು ಇಳೆಯೋಳ್
ಭೀಮನೇ ಯತಿರೂಪದಲ್ಲಿ ಬಂದಿಹನೆಂದು
ಸುಮನಸ ರಾಜ ಪುಟ್ಟಿದನು ಪುನ: ।೭।

ಹದಿನೆಂಟು ವರುಷಗಳು ಎತ್ತಾಗಿ ತಾನಿದ್ದು
ಹೊತ್ತು ಮಧ್ವಾಚಾರ್ಯರ ಪುಸ್ತಕಗಳ
ಭಕ್ತಿಯಲಿ ಸೇವಿಸಿ ಮಧ್ವರಾಯರು ಪಾಠ
ಬೋಧಿಸುವುದು ಕೇಳ್ದ ವೃಷಭರಾಟ್ ಇಂದ್ರ ।೮।

ಆನಂದ್ರಪ್ರದ ತತ್ತ್ವಬೋಧಕ ಭಾಷ್ಯಾದಿಗಳ
ಆನಂದ ಮುನಿಮಧ್ವ ಬೋಧಿಸಲು ಗ್ರಹಿಸಿ
ವಿನಯದಿ ಕೇಳ್ದರು ಶಿಷ್ಯರು ಟೀಕೆಗಳ
ಗ್ರಂಥಗಳಿಗೆ ಯಾರು ಮಾಡುವುದು ಎಂದು ।೯।

ಈ ಗೋರಾಜನೇ ಟೀಕೆಗಳ ಸಂರಚಿಸಿ
ಜಗತ್ತಲ್ಲಿ ಸತ್ತತ್ತ್ವ ಶಾಸ್ತ್ರ ಪ್ರಕಟಿಸುವ
ಹೀಗೆಂದು ಶ್ರೀಮಧ್ವಾಚಾರ್ಯರಾಜ್ಞಾಪಿಸಲು
ಮಿಗೆ ಹರುಷದಲಿ ಗೋರಾಟ್ ಶಿರವ ಬಾಗಿದನು । ೧೦ ।

ಯುಕ್ತಕಾಲದಿ ಈ ಗೋರಾಜ ನೇವೆ
ರಘುನಾಥ ದೇಶಪಾಂಡೆ ರುಕ್ಮಾಬಾಯಿಗೆ
ಮಗನಾಗಿ ಜನಿಸಿದನು ಮಂಗಳವೇಢೆಯಲಿ
ಈ ಗ್ರಾಮ ಪಂಡರಪುರದ ಸಮೀಪ । ೧೧ ।

ಧೋಂಡುರಾಯನು ಎಂಬ ನಾಮದಲಿ ಬೆಳೆದ
ಗಂಡಿಗೆ ಉಪನಯನ ಮದುವೆಯೂ ಆಯ್ತು
ಹೆಂಡತಿ ಭೀಮಾಬಾಯಿ ಸುಗುಣೆ ಸೌಂದರ್ಯವತಿ
ಚಂಡ ಶ್ರೀಮಂಟರ ಮನೆತನದವಳು । ೧೨ ।

ಒಂದು ದಿನ ಧೋಂಡುರಾಯನು ನದೀ ದಡಕೆ
ಬಂದನು ಕುದುರೆಯ ಮೇಲೇರಿಕೊಂಡು
ಅಂದು ಅಕ್ಷೋಭ್ಯಮಠ ಸಂಚಾರ ಕ್ರಮದಲಿ
ನಿಂತಿತ್ತು ಮೊಕ್ಕಾಮಾಗಿ ಆಚೆಕಟ್ಟೆಯಲಿ । ೧೩ ।

ನದೀತೀರ ಕುಳಿತಿದ್ದ ಅಕ್ಷೋಭ್ಯತೀರ್ಥರು
ಎದುರಾಗಿ ನದಿಯಲಿ ಆಚೆದಡದಿಂದ
ಕುದುರೆ ಸವಾರನು ವರ್ಚಸ್ವಿ ಯುವಕನು
ಬೆದರದೆ ಪ್ರವಾಹದಲಿ ಬರುವುದು ನೋಡಿಹರು । ೧೪ ।

ಕುದುರೆ ಮೇಲೆ ಆಸೀನನಾಗಿದ್ದ ಯುವಕನು
ಕ್ಷುತ್ ತೃಷೆ ಶಮನಕೆ ಯತ್ನ ಮಾಡುತ್ತಾ
ಉದಕವ ಕೈಯಿಂದ ತುಂಬಿಕೊಳ್ಳದಲೇ
ಎತ್ತುಗಳು ಕುಡಿವಂತೆ ಬಾಯಿ ಹಚ್ಚಿದನು । ೧೫ ।

ಮಾಧವ ಮಧ್ವರು ಮೊದಲೇ ಸೂಚಿಸಿದಂತೆ
ಇಂದು ಆ ಕುರುಹು ಅರಿತು ಅಕ್ಷೋಭ್ಯರು
ಇದು ಏನು ‘ಪಶು’ವಂತೆ ಎಂದು ಧ್ವನಿಕೊಟ್ಟರು
ಹಿಂದಿನ ಜನ್ಮ ಧೋಂಡುಗೆ ನೆನಪಾಯ್ತು । ೧೬ ।

ಪ್ರವಾಹದ ನಗಾರಿಯ ಸಮಬಲಿ ಧೋಂಡು
ವೇಗ ಲೆಕ್ಕಸದಲೇ ದಡಕೆ ತಾ ಬಂದು
ಮುಗಿದ ಕರ ಬಾಗಿ ಶಿರ ನಮಿಸಿ ಅಕ್ಷೋಭ್ಯರ
ಆಗಲೇ ಸಂನ್ಯಾಸ ಕೊಡಲು ಬೇಡಿದನು । ೧೭ ।

ಗಾಧಿ ಅರ್ಜುನ ಸಮ ಬಲ ರೂಪದಲಿ ತೋರ್ಪ
ಈತ ರಾಯರ ಸುತನಾದರೂ ವೈರಾಗ್ಯ
ಯುತ ಭಕ್ತಿಮಾನ್ ಸುಶುಭ ಲಕ್ಷಣನೆಂದು ಹರಿ
ಮಧ್ವ ನಿಯಮಿತ ಅವಗೆ ಕೊಟ್ಟರು ಸಂನ್ಯಾಸ । ೧೮ ।

ಶ್ರೀಯ:ಪತಿಗೆ ಪ್ರಿಯಕರ ಜಯತೀರ್ಥನಾಮವ
ಜಯಶೀಲ ಹೊಸಯತಿಗೆ ಇತ್ತು ಅಭಿಷೇಕ
ಅಕ್ಷೋಭ್ಯ ಗುರು ಮಾಡೆ ಗಗನದಿ ಪೂವರ್ಷ
ಜಯ ಘೋಷ ಹರಡಿತು ಪರಿಮಳ ಸುಗಂಧ । ೧೯ ।

ತಂದೆ ರಘುನಾಥರಾಯನು ಸುದ್ದಿ ಕೇಳಿ
ಬಂದು ಅಕ್ಷೋಭ್ಯರ ಕಂಡು ಬಲುಕೋಪ
ದಿಂದ ಯಾಕೆ ಸಂನ್ಯಾಸ ಯುವಕಗೆ ಕೊಟ್ಟಿರಿ
ಎಂದು ವಾದಿಸಿದನು ಪುತ್ರ ಮೋಹದಲಿ । ೨೦ ।

ಪೂರ್ವಧೋಂಡುರಾಯ ಈಗ ಜಯತೀರ್ಥರು
ತಾವೇ ಸ್ವೇಚ್ಛೆಯಿಂದ ಕೊಂಡರು ಸಂನ್ಯಾಸ
ಈ ವಿಷಯ ತಿಳಕೊಂಡರೂ ಸಹ ರಘುನಾಥ
ಸೇವಕರ ಸಹ ಮಗನ ಕರಕೊಂಡು ಹೋದ । ೨೧ ।

ರಾಯನು ಮಗನನ್ನ ಗೃಹಸ್ಥ ಚರ್ಯದಲಿರಿಸೆ
ಶಯನ ಗೃಹದೊಳು ಪತ್ನಿ ಸಹಿತ ಕಳುಹಿದನು
ಶಯನ ತಲ್ಪದಿ ದೊಡ್ಡ ಸರ್ಪ ಕಂಡಳು ಯುವತಿ
ಭಯದಿಂದ ಹೊರಬಂದು ಹೇಳಿದಳು ವಿಷಯ । ೨೨ ।

ತನ್ನ ಪತಿ ಧೋಂಡುರಾಯನ್ನ ತಲ್ಪದಲಿ
ಕಾಣದೆ ಅವರಿದ್ದ ಸ್ಥಾನದಲಿ ಸರ್ಪ
ಘನ ದೀರ್ಘ ಗಾತ್ರ ವಿಸ್ತಾರ ಹೆಡೆಯಿಂದ
ಮಿನುಗುತ್ತ ಕುಳಿತಿದ್ದ ವಿವರ ಪೇಳಿದಳು । ೨೩ ।

ರಘುನಾಥರಾಯನು ಹರಿಚಿತ್ತ ಇದು ಎಂದು
ಮಗನ ಪ್ರಭಾವವ ಅರಿತು ತ್ವರಿತದಲಿ
ಅಕ್ಷೋಭ್ಯರಲಿ ಹೋಗಿ ಶಿಷ್ಯನ್ನ ಒಪ್ಪಿಸಿ
ಬಾಗಿ ಶಿರ ಸನ್ನಮಿಸಿ ಕ್ಷಮೆಯ ಬೇಡಿದನು । ೨೪ ।

ವಂಶ ವೃದ್ಧಿಗೆ ಮತ್ತೂ ಪುತ್ರ ಪುಟ್ಟವನೆಂದು
ದೇಶಪಾಂಡೆಯ ಅನುಗ್ರಹಿಸಿ ಕಳುಹಿಸಿ
ದಶಪ್ರಮತಿ ಪೀಳಿಗೆಯೊಳು ಅಕ್ಷೋಭ್ಯ ಮುನಿಗಳು
ಶಿಷ್ಯ ಜಯತೀರ್ಥರಿಗೆ ಸ್ಥಾನ ನೇಮಿಸಿದರು । ೨೫ ।

ಶ್ರೀ ಮಧ್ವಾಚಾರ್ಯರು ಬೋಧಿಸಿ ತೋರಿಸಿದ
ಶ್ರೀ ರಮಾಪತಿ ಪೂಜಾ ಸತ್ತತ್ವವಾದ
ದುರ್ಮತ ಖಂಡನದ ರೀತಿಯ ಜಯಾರ್ಯರಿಗೆ
ಸಮ್ಮುದದಿ ಅರುಹಿದರು ಅಕ್ಷೋಭ್ಯ ಗುರುವು । ೨೬ ।

ಶಕ ವರುಷ ಹನ್ನೊಂದು ನೂರು ಅರವತ್ತೇಳು
ಮಾರ್ಗಶಿರ ಕೃಷ್ಣ ಪಂಚಮಿ ವಿಶ್ವಾವಸುವಲ್ಲಿ
ಅಕ್ಶೋಭ್ಯತೀರ್ಥರ ಪೀಠ ಆರೋಹಿಸಿ
ಶ್ರೀಕರಗೆ ಪ್ರೀತಿಕರ ಪಟ್ಟವಾಳಿದರು । ೨೭ ।

ದೇವತಾರ್ಚನೆ ಶಿಷ್ಯ ಉಪದೇಶ ಮಾಡುತ್ತ
ದಿಗ್ವಿಜಯದಲಿ ದುರ್ವಾದಿಗಳ ಗೆದ್ದು
ಮಧ್ವ ಗ್ರಂಥಗಳಿಗೆ ಟೀಕೆಗಳ ರಚಿಸಿ
ಪ್ರಖ್ಯಾತರಾದರು ಜಯತೀರ್ಥ ಆರ್ಯ । ೨೮ ।

ವನರು ಹಾಸನ ಪಿತ **ಶ್ರೀಪ್ರಸನ್ನ ಶ್ರೀನಿವಾಸ**
ಪೂರ್ಣಪ್ರಜ್ಞರ ಹೃಸ್ಥ ಜನ್ಮಾದಿ ಕರ್ತ
ಗುಣ ಪೂರ್ಣ ನಿರ್ದೋಷ ಶ್ರೀಯಃ ಪತಿಗೆ ಪ್ರಿಯ
ಘನ ಕರುಣಿ ಜಯತೀರ್ಥ ಗುರು ನಮೋ ಪಾಹಿ । ೨೯ ।

**।ಶ್ರೀ ಪ್ರಸನ್ನ ಶ್ರೀನಿವಾಸ ದಾಸರ ವಿರಚಿತ ಶ್ರೀ ಜಯತೀರ್ಥ ವಿಜಯ ಸಂಪೂರ್ಣಂ ।**